**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ದೇವದುರ್ಗ**

**ಸಿ.ಸಿ.ನಂ.40/2024**

ಪಿರ್ಯಾದಿದಾರರು: ಗಬ್ಬೂರು ಪೋಲಿಸ ಠಾಣೆ

**ವಿರುದ್ದ**

ಆರೋಪಿತರು:

1. ರಾಮ ತಂದೆ ಬುರ್ಲಿ ಬಸ್ಸಪ್ಪ,
   ವಯಸ್ಸು: 24 ವರ್ಷ, ಉ: ಒಕ್ಕಲುತನ,
   ಸಾ: ಹಿರೆಬೂದೂರು.

2. ರಂಗನಾಥ ತಂದೆ ಗೋನಪ್ಪ,
   ವಯಸ್ಸು: 21 ವರ್ಷ, ಉ: ಒಕ್ಕಲುತನ,
   ಸಾ: ಹಿರೆಬೂದೂರು.

**<u>ದೋಷಾರೋಪಣೆ</u>**

ನಾನು ಹೆ.ಚ್.ಎ.ಸಾತ್ವಿಕ್, ದೇವದುರ್ಗದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೋರಿಸುವುದೇನೆಂದರೆ,

ದಿನಾಂಕ:10.07.2023 ರಂದು ಬೆಳಗ್ಗೆ 08.30 ಗಂಟೆಯ ಸಮಯದಲ್ಲಿ ಗಬ್ಬೂರು ಪೊಲೀಸ ಠಾಣಾ ವ್ಯಾಪ್ತಿಯಲ್ಲಿರುವ ಸುಂಕೇಶ್ವರಹಾಳ ಗ್ರಾಮದ ಸಿಮಾಂತರದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಾಕ್ಷಿ-1 ಮತ್ತು 4 ರವರು ತಮ್ಮ ಹೊಲದಲ್ಲಿ ಮುಧೋಳ ನಾಯಿ ಸಾಕಿದ್ದು ಅದನ್ನು ಕಳ್ಳತನ ಮಾಡಿಕೊಂಡು ಹೋಗಿರುವಿರೆಂದು ನಿಮ್ಮ ವಿರುದ್ದ ಭಾ.ದಂ.ಸಂ. ಕಲಂ 379 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

ಪ್ರಶ್ನೆ:1 ಈ ಮೇಲೆ ಓದಿ ಹೇಳಿದ ದೋಷಾರೋಣೆಗಳು ನಿಮಗೆ ಅರ್ಥವಾಯಿತೇ ?

1 ನೇ ಆರೋಪಿ ಉತ್ತರ: ತಿಳಿದಿದೆ.

2 ನೇ ಆರೋಪಿ ಉತ್ತರ: ತಿಳಿದಿದೆ.

ಪ್ರಶ್ನೆ:2 ಸದರಿ ದೋಷಾರೋಪಣೆಗಳನ್ನು ನೀವು ಒಪ್ಪಿಕೊಳ್ಳುವಿರಾ ?

1 ನೇ ಆರೋಪಿ ಉತ್ತರ: ಇಲ್ಲಾ.

2 ನೇ ಆರೋಪಿ ಉತ್ತರ: ಇಲ್ಲಾ.

ಪ್ರಶ್ನೆಃ3 ಸದರಿದೋಷಾರೋಪಣೆಗಳ ಬಗ್ಗೆ ನಿಮ್ಮ ವಿಚಾರಣೆ ಆಗಬೇಕೆ ?

1ನೇ ಆರೋಪಿ ಉತ್ತರಃ ವಿಚಾರಣೆಯಾಗಬೇಕು.

2ನೇ ಆರೋಪಿ ಉತ್ತರಃ ವಿಚಾರಣೆಯಾಗಬೇಕು.

(ಸದರಿ ಆರೋಪಣೆಗಳನ್ನು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಆರೋಪಿತರು ನೀಡಿದ ಉತ್ತರ/ಉತ್ತರಗಳನ್ನು ಸರಿಯಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.)

ದಿನಾಂಕಃ 29.07.2024 ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.
ಸ್ಥಳಃ ದೇವದುರ್ಗ ದೇವದುರ್ಗ.